೫ ಶ್ರೀ ಕೆ. ವಂಟ್ಲಪ್ಪ, ಎಂಎಲ್ಎ
೬ ಶ್ರೀ ಲೋಕಯ್ಯ ಶೆಟ್ಟಿ, ಎಂಎಲ್ಎ
೭ ಶ್ರೀ ಬಾಕಿಲ ಹುಕೇರಪ್ಪ, ಎಂಎಲ್ಎ
೮ ಶ್ರೀ ಕೆ. ಯು. ಶೆಟ್ಟಿ, ನಿರ್ದೇಶಕರು, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ.
೯ ಶ್ರೀ ಜೆ. ಎಂ. ಅಪ್ಪಚ್ಚು, ಕೋಚ್.
೧೦ ಕುಮಾರಿ ವಂದನಾರಾವ್, ಕ್ರೀಡಾಪಟು.

ಆ) ರೂ. ೩,೫೫,೮೦೩–೩೩.

ಇ) ಕರ್ನಾಟಕದ ಕ್ರೀಡಾ ಅಭಿವೃದ್ಧಿಗೆ ಅವರ ಸಲಹೆ, ಸ್ಫೂರ್ತಿ ದೊರಕಿದೆ.

ಈ) ವೈಯಕ್ತಿಕ ಕಾರಣಗಳಿಂದಾಗಿ ಹೊರಡಲಾಗಲಿಲ್ಲ.

ಉ) ಕ್ರೀಡಾ ಕ್ಷೇತ್ರದಲ್ಲಿ ಸಲ್ಲಿಸಿರುವ ಸೇವೆಗಳನ್ನು ಗಮನಿಸಿ ಪ್ರತಿನಿಧಿಗಳನ್ನು ಸರ್ಕಾರದ ವಿವೇಚನೆ ಮೇರೆಗೆ ಆಯ್ಕೆ ಮಾಡಲಾಗಿದೆ.

ಸಿಬ್ಬಂದಿ ಕೊರತೆ ಇರುವ ಪ್ರಾಥಮಿಕ ಆರೋಗ್ಯ ಘಟಕಕ್ಕೆ ನೇಮಕಾತಿ ಕುರಿತಂ

೭೭೧. ಶ್ರೀ ಕೆ. ಪ್ರತಾಪ ಚಂದ್ರಶೆಟ್ಟಿ (ಕುಂದಾಪುರ).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕುಂದಾಪುರ ಕ್ಷೇತ್ರದ ಗಂಗೊಳ್ಳಿ ಪ್ರಾಥಮಿಕ ಆರೋಗ್ಯ ಘಟಕಕ್ಕೆ ಮಂಜೂರಾದ ವಿವಿಧ ದರ್ಜೆಯ ಸಿಬ್ಬಂದಿಗಳ ಸಂಖ್ಯಾ ಬಲವೆಷ್ಟು ? (ದರ್ಜೆವಾರು ವಿವರ ನೀಡುವುದು)

ಆ) ಅಲ್ಲಿ (ಗಂಗೊಳ್ಳಿ ಪ್ರಾಥಮಿಕ ಆರೋಗ್ಯ ಘಟಕದ) ಕೊರತೆ ಇರುವ ವಿವಿಧ ದರ್ಜೆಯ ಸಿಬ್ಬಂದಿಗಳ ಸಂಖ್ಯಾ ಬಲವೆಷ್ಟು ?

ಇ) ಈ ಕೊರತೆಯನ್ನು ಯಾವಾಗ ಸರಿಪಡಿಸಲಾಗುವುದು ?

ಶ್ರೀ ಎಚ್. ಎಲ್. ತಿಮ್ಮೇಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

ಆ)

ಆರೋಗ್ಯಾಧಿಕಾರಿ (ಸಿನೇ ದರ್ಜೆ)	...	೧
ಔಷಧಿ ವಿತರಕರು	...	೧
ಕಿರಿಯ ಆರೋಗ್ಯ ಸಹಾಯಕಿ	...	೧
ಗ್ರೂಪ್ 'ಡಿ'	...	೨
		೫

ಆ) ಒಂದು ವೈದ್ಯರ ಹುದ್ದೆ ಮಾತ್ರ ಖಾಲಿ ಇದೆ.

ಇ) ಈ ಪ್ರಾಥಮಿಕ ಆರೋಗ್ಯ ಘಟಕಕ್ಕೆ ಮಂಜೂರಾಗಿರುವ ವೈದ್ಯರ ಹುದ್ದೆ ಮೂರನೇ ದರ್ಜೆಯ ಹುದ್ದೆ, ಈಗ ಸರ್ಕಾರವು ಇವರನ್ನು ನೇಮಕ ಮಾಡುತ್ತಿಲ್ಲ. ಅಲ್ಲದೆ ಮೂರನೇ ದರ್ಜೆಯ ೧೮೦ ವೈದ್ಯರ ಹುದ್ದೆಗಳನ್ನು ಒಂದೇ ದರ್ಜೆಗೆ ಉನ್ನತೀಕರಿಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

ರಾಜ್ಯದಲ್ಲಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ನೀಡಿರುವ ಬಗ್ಗೆ

೯೪೯. ಶ್ರೀ ಆರ್. ಎನ್. ನಾಯ್ಕ (ಭಟ್ಕಳ).—ಮಾನ್ಯ ವಾರ್ತಾ, ಯುವಜನ ಸೇವಾ, ಕ್ರೀಡಾ ಹಾಗೂ ಪ್ರವಾಸೋದ್ಯಮ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ಎಷ್ಟು ಜನರಿಗೆ ನೀಡಲಾಗಿದೆ,

ಅ) ಉತ್ತರ ಕನ್ನಡ ಜಿಲ್ಲೆಯಿಂದ ಎಷ್ಟು ಅರ್ಜಿಗಳು ಅಕಾಡೆಮಿ ಪ್ರಶಸ್ತಿ ಕೋರಿ ಬಂದಿದ್ದವು ಹಾಗೂ ಹಿಂದುಳಿದ ವರ್ಗಕ್ಕೆ ಸೇರಿದವರ ಅರ್ಜಿಗಳ ಸಂಖ್ಯೆ ಎಷ್ಟು.

ಇ) ಉತ್ತರ ಕನ್ನಡ ಜಿಲ್ಲೆಗೆ ಸೇರಿದವರಲ್ಲಿ ಪ್ರಶಸ್ತಿ ಪಡೆದ ಹರಿಜನ ಗಿರಿಜನ ಹಿಂದುಳಿದ ಅಲ್ಪ ಸಂಖ್ಯಾತ ವಂಗಡಕ್ಕೆ ಸೇರಿದವರ ಸಂಖ್ಯೆ ಎಷ್ಟು ?

ಶ್ರೀ ಜೀವರಾಜ ಆಳ್ವ (ವಾರ್ತಾ, ಪ್ರವಾಸೋದ್ಯಮ ಹಾಗೂ ಯುವಜನ ಸೇವಾ ರಾಜ್ಯ ಸಚಿವರು).—

ಅ) ೧೧೭ ಜನರಿಗೆ.

ಆ) ಅಕಾಡೆಮಿಯು ಪ್ರಶಸ್ತಿಗಾಗಿ ಅರ್ಜಿಗಳನ್ನು ಸ್ವೀಕರಿಸುವ ಪದ್ಧತಿ ಜಾರಿಯಲ್ಲಿಲ್ಲ. ಸಾಹಿತ ಕ್ಷೇತ್ರದಲ್ಲಿ ಅಮೋಘ ಸೇವೆ ಸಲ್ಲಿಸಿದ ಸಾಹಿತಿಗಳನ್ನು ಪ್ರತಿ ವರ್ಷ ಅಕಾಡೆಮಿಯು ಸರ್ವ ಸದಸ್ಯರ ಸಭೆಯಲ್ಲಿ ಆಯ್ಕೆ ಮಾಡಲಾಗುತ್ತಿದೆ.

ಇ) ಜಾತಿ ಆಧರಿಸಿ, ಅಕಾಡೆಮಿ ಪ್ರಶಸ್ತಿ ನೀಡುತ್ತಿಲ್ಲ.

ಮುಂಧೋಳ್ ತಾಲ್ಲೂಕು ಬೆಳಗಲಿ ಗ್ರಾಮಕ್ಕೆ ಪ್ರಾಥಮಿಕ ಆರೋಗ್ಯ ಘಟಕದ ಮಂಜೂರಾತಿ

೯೩೬. ಶ್ರೀ ಬಿ. ಜಿ. ಜವಳಿ (ಮುಧೋಳ್).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮುಧೋಳ್ ತಾಲ್ಲೂಕು ಬೆಳಗಲಿ ಗ್ರಾಮಕ್ಕೆ ಪ್ರಾಥಮಿಕ ಆರೋಗ್ಯ ಘಟಕ ಯಾವಾಗ ಮಂಜೂರು ಆಯಿತು ?

ಆ) ಆಲ್ಲಿನ ಆಸ್ಪತ್ರೆಯ ನಿರ್ಮಾಣ ಯಾವಾಗ ಪೂರ್ತಿ ಆಗುವುದು ?

ಶ್ರೀ ಹೆಚ್. ಎಲ್. ತಿಮ್ಮೇಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

ಅ) ದಿನಾಂಕ ೨೩-೩-೧೯೮೨ರಂದು.

ಆ) ಈ ಕಾಮಗಾರಿಗೆ ಲೋಕೋಪಯೋಗಿ ಇಲಾಖೆಯು ಟೆಂಡರ್‌ಗಳನ್ನು ಕರೆದಿದೆ. ಗುತ್ತಿಗೆ ದಾರರನ್ನು ಗೊತ್ತುಪಡಿಸಿ ಕಟ್ಟಡದ ಕಾರ್ಯವನ್ನು ಕೈಗೊಂಡು ಪ್ರಾರಂಭಿಸಿದಂದಿನಿಂದ ಸುಮಾರು ೧ ಅಥವಾ ೧½ ವರ್ಷಗಳಲ್ಲಿ ಪೂರೈಸುವರು.

ಕುಟುಂಬ ಕಲ್ಯಾಣ ಶಸ್ತ್ರಚಿಕಿತ್ಸೆಗೆ ಒಳಪಟ್ಟವರಿಗೆ ವಿಶ್ರಾಂತಿ ವೇತನ

೯೩೭. ಶ್ರೀ ಕೆ. ಕಾಶಾಲ(ಸುಳ್ಯ).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕುಟುಂಬ ಕಲ್ಯಾಣ ಶಸ್ತ್ರ ಚಿಕಿತ್ಸೆ ಹಾಗೂ ಶಸ್ತ್ರ ಕ್ರಿಯೆಯನ್ನು ಪಡೆದ ಪಡೆಯಲಿರುವ ಅರ್ಹ ಬಡ ದಂಪತಿಗಳಲ್ಲಿ ಶಸ್ತ್ರ ಚಿಕಿತ್ಸೆಗೆ ಒಳಪಟ್ಟವರಿಗೆ ಮಾಸಿಕ ರೂ. ೫೦-೦೦ ಅಥವಾ ಒಕ್ಕರಂತೆ ವಿಶ್ರಾಂತಿ ವೇತನ ನೀಡುವ ವ್ಯವಸ್ಥೆಯನ್ನು ಮಾಡಲು ಸರ್ಕಾರದವರು ಉದ್ದೇಶಿಸಿರುವರೆ ?

ಶ್ರೀ ಹೆಚ್. ಎಲ್. ತಿಮ್ಮೇಗೌಡ(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).—

ಅ) ಇಲ್ಲ.

ಉತ್ತರ ಕನ್ನಡ ಜಿಲ್ಲೆಯ ಸಿರ್ಸಿಯಲ್ಲಿರುವ ಸಾರ್ವತ್ರಿಕ ಆಸ್ಪತ್ರೆಯ ಕುರಿತು.

೯೩೮. ಶ್ರೀ ಗೋಪಾಲ ಮುಕುಂದ ಕಾನಡೆ(ಸಿರ್ಸಿ).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸಿರ್ಸಿ ಸಾರ್ವಜನಿಕ ಆಸ್ಪತ್ರೆಗೆ ಸರ್ಕಾರದವರಿಂದ ಏನಾದರೂ ಹಣ ಮಂಜೂರಾಗಿದೆಯೇ ?